# 30

# “ಕೃಪೆಯು ನಿಮ್ಮೆಲ್ಲರೊಂದಿಗಿರಲಿ”

# (13:10-12, 15-25)

ನಾವು ಈಗ ಇಬ್ರಿಯ ಪತ್ರಿಕೆಯ ಅಂತ್ಯ ಭಾಗಕ್ಕೆ ಬಂದಿದ್ದೇವೆ. ಹಿಂಜರಿದ ಕ್ರೈಸ್ತರ ಅನೇಕ ಎಚ್ಚರಿಕೆಯ ಮಾತುಗಳನ್ನು ಸಹ ಕೇಳಿದ್ದೇವೆ. ಇಲ್ಲಿ ಬರಹಗಾರನು ವೈಯಕ್ತಿಕವಾದ ಅನೇಕ ಮನವಿಗಳನ್ನು ಸಹ ಮಾಡಿರುವನು.

## ಪ್ರಸಂಗಿಯಿಂದ ಒಂದು ಎಚ್ಚರದ ಮಾತು (13:10-12, 15-17)

### ದೇವರನ್ನು ಆರಾಧಿಸಿರಿ ಹಾಗೂ ಇತರರ ಸೇವೆ ಮಾಡಿರಿ (13:10-12, 15, 16)

ವಚನ 10 ರಿಂದ ತ್ಯಾಗಮಯವಾದ ಭಾಷೆಯನ್ನು ಪತ್ರಿಕೆಯಲ್ಲಿ ಬಳಸಲಾಗಿದೆ. ಕ್ರೈಸ್ತರ ವಿರೋಧಿಗಳಾದ ಯೆಹೂದ್ಯರ ನಿಮಿತ್ತವಾಗಿ ಈ ಮಾತನ್ನು ಬರೆಯಲಾಗಿದೆ. ಕ್ರೈಸ್ತರಿಗೆ ಯಜ್ಞವೇದಿ ಇಲ್ಲ ಎಂದು ಯೆಹೂದ್ಯರು ಹೇಳುವದಾದರೆ, ಕ್ರೈಸ್ತರು ನಮಗೆ ಕ್ರಿಸ್ತನ ಶಿಲುಬೆಯಲ್ಲಿ ಒಡಂಬಡಿಕೆಯಾದ ಒಂದು ಆತ್ಮೀಕ ಯಜ್ಞವೇದಿಯಿದೆ ಎಂದು ಹೇಳಬಹುದು ಪ್ರಾಣಿಗಳ ದೇಹವನ್ನು ಪಾಳೆಯದ ಹೊರಗೆ ತೆಗೆದು ಕೊಂಡು ಹೋದ ಹಾಗೆ ಕ್ರಿಸ್ತನು ಪಾಳೆಯದ ಹೊರಗೆ ಯಜ್ಞವಾದನು (ಯೆರೂಸಲೇಮು) (ವಚನಗಳು 11, 12; ಯಾಜಕಕಾಂಡ 16:27).

ಒಂದು ವೇಳೆ ಯೆಹೂದ್ಯರು, ಯಜ್ಞವನ್ನು ಅರ್ಪಿಸುವ ಯಾಜಕರನ್ನು ಕ್ರೈಸ್ತರು ಹೊಂದಿರುವದಿಲ್ಲ ಎಂದು ಹೇಳಬಹುದು. ಅಂತಿಮವಾದ ಯಾಜಕನು ಯೇಸು ಮಾತ್ರವೇ ಎಂದು ಇಬ್ರಿಯ ಪುಸ್ತಕದಲ್ಲಿ ಬರೆಯಲಾಗಿದೆ. ವಚನಗಳು 15-16ರಲ್ಲಿ ಸಕಲ ಕ್ರೈಸ್ತರು ಯಾಜಕರಾಗಿದ್ದಾರೆ ಎಂಬ ಅಂಶವಿದೆ (1 ಪೇತ್ರ 2:9), ಅವರುಗಳು ಸಹ ದೇವರಿಗೆ ಯಜ್ಞವನ್ನು ಅರ್ಪಿಸಬಹುದು. ಆದರೆ ಅದು ಪ್ರಾಣಿಗಳ ಯಜ್ಞವಲ್ಲ (ಇಬ್ರಿಯ 10:5). ಹೌದು ಅದು *ಆತ್ಮೀಕ* ಯಜ್ಞವಾಗಿದೆ. ಕ್ರೈಸ್ತರು ಯಾವ ವಿಧವಾದ ಯಜ್ಞಗಳನ್ನು ಅರ್ಪಿಸಬಹುದು?

- ತುಟಿಗಳಿಂದ ಬರುವ “ಸುತಿ ಯಜ್ಞ” (13:15).
- ಪರೋಪಕಾರ (ವಚನ 16). ದೇವರ ಪ್ರೀತಿ ಅಡಕವಾಗಿದೆ (1 ಯೋಹಾನ 4:20).
- ನಮ್ಮ ಜೀವಿತವನ್ನೆ ದೇವರಿಗೆ ಅರ್ಪಿಸುವ ಕ್ರಿಯೆ (ರೋಮಾಪುರ 12:1, 2).

ಯಜ್ಞಗಳಲ್ಲಿ ಆತನು ಇನ್ನೆಂದಿಗೂ ಸಂತೋಷಿಸುವದಿಲ್ಲ (10:6). ಆತ್ಮೀಕ ಯಜ್ಞಗಳನ್ನು ಮಾತ್ರ ಮೆಚ್ಚುತ್ತಾನೆ (13:16).

### ನಿಮ್ಮ ಹಿರಿಯರಿಗೆ ವಿಧೇಯತೆಯಿಂದ ಅಧೀನರಾಗಿರಿ (13:17)

ಇಬ್ರಿಯ 13:7 ರಲ್ಲಿ ಇಬ್ರಿಯ ಕ್ರೈಸ್ತರ ಹಳೆಯ ಹಿರಿಯರ ಬಗ್ಗೆ ತಿಳಿಸಲಾಗಿದೆ. ಈಗ ಪ್ರಚಲಿತದಲ್ಲಿರುವ ನಾಯಕರ ಕುರಿತು ಹೇಳಲಾಗಿದೆ.[1] ವಚನ 17ರ ಹಿರಿಯರು ಎಂದರೆ ಸಭಾನಾಯಕರುಗಳೇ ಒಂದು ವೇಳೆ ಅವರು ವಾಕ್ಯಕ್ಕೆ ತದ್ವಿರುದ್ಧವಾದದ್ದನ್ನು ತಿಳಿಸಿದರೆ, ಅದನ್ನು ಒಪ್ಪಬಾರದು (ಅಪೊಸ್ತಲರ ಕೃತ್ಯಗಳು 5:29). ತೀರ್ಮಾನ ಹಾಗೂ ಅಭಿಪ್ರಾಯದ ವಿಚಾರದಲ್ಲಿ ಅಧೀನರಾಗಿರಬೇಕು. ವಚನ 17ರಂತೆ, ಯಾರೂ ಸಹ

ನಾಯಕತ್ವವನ್ನು ಅಲಕ್ಷಿಸಬಾರದು ಎಂದು ತಿಳಿಸಲಾಗಿದೆ.

ಏಕೆ ಹಿರಿಯರಿಗೆ ಅಧೀನರಾಗಬೇಕು? ವಚನ 17 ಕಡೆಯ ಭಾಗದಲ್ಲಿ ಉತ್ತರವಿದೆ: "ನಿಮ್ಮ ಸಭಾನಾಯಕರ ಮಾತನ್ನು ಕೇಳಿರಿ, ಅವರಿಗೆ ಅಧೀನರಾಗಿರಿ. ಅವರು ಲೆಕ್ಕ ಒಪ್ಪಿಸಬೇಕಾದವರಾಗಿ ನಿಮ್ಮ ಆತ್ಮಗಳನ್ನು ಕಾಯುವವರಾಗಿದ್ದಾರೆ. ಅವರು ವ್ಯಸನಪಡದೆ ಸಂತೋಷದಿಂದ ಇದನ್ನು ಮಾಡುವಂತೆ ನೋಡಿರಿ; ಅವರು ವ್ಯಸನದಿಂದಿರುವದು ನಿಮಗೆ ಪ್ರಯೋಜನಕರವಾದದ್ದಲ್ಲ."

## ಒಬ್ಬ ಸ್ನೇಹಿತನಿಂದಾದ ಒಂದು ಮನವಿ (13:18, 19, 22, 24)

ವಚನ 18 ರಿಂದ 25ರ ಭಾಗದಲ್ಲಿ ಪುಸ್ತಕವನ್ನು ಮುಕ್ತಾಯಗೊಳಿಸಲಾಗಿದೆ. ಅಲ್ಲಿ ಕೆಲವು ಮನವಿಗಳು ಸಹ ಅಡಕವಾಗಿವೆ. ಅದು ಒಬ್ಬ ಬೋಧಕ ಅಥವಾ ಪ್ರಸಂಗಿಯ ಮಾತಾಗಿರದೆ, ಸ್ನೇಹಿತನ ಬಿನ್ನಹವಾಗಿದೆ.

### "ನಮಗೋಸ್ಕರ ಪ್ರಾರ್ಥಿಸಿರಿ" (13:18, 19)

ಅನೇಕ ಬಾರ ಪೌಲನು ತನಗಾಗಿ ಪ್ರಾರ್ಥಿಸಿರಿ ಎಂಬ ಮನವಿಯನ್ನು ಮಾಡಿರುವನು (ರೋಮಾಪುರ 15:30; ಕೊಲೊಸ್ಸೆ 4:3; 2 ಥೆಸಲೋನಿಕ 3:1); ಈ ಬರಹಗಾರನು ಸಹ ಇದನ್ನೇ ಮಾಡಿರುವನು (ಇಬ್ರಿಯ 13:18). ಅದನ್ನು ಇನ್ನೂ ಹೆಚ್ಚಿನ ಯಥಾರ್ಥತೆಯಿಂದ ಮಾಡಿರಿ ಎಂದಿರುವನು (ವಚನ 19). ಅವನ ಓದುಗರಲ್ಲಿ ಅವನು ಅತ್ಯಾಸಕ್ತಿವುಳ್ಳವನಾಗಿ, ನಾನು ಒಳ್ಳೇ ಮನಸ್ಸಾಕ್ಷಿಯಿಂದ ಇದನ್ನು ಹೇಳುತ್ತಿರುವೆನು ಎಂದಿರುವನು. (ಹೇಳುವದಕ್ಕೆ ಅವನಲ್ಲಿ ಹೆಚ್ಚಿನ ವಿಚಾರ ಇದ್ದಿರಲೂ ಬಹುದು [ವಚನ 19].)

### "ಈ ಎಚ್ಚರಿಕೆಯ ಮಾತನ್ನು ಸಹಿಸಿಕೊಳ್ಳಿರಿ" (13:22)

ಇಬ್ರಿಯ ಕ್ರೈಸ್ತರು ಅವನ ಬರಹವನ್ನು ಅರ್ಥೈಸಿಕೊಳ್ಳಲು ಶ್ರಮಪಟ್ಟಿರ ಬಹುದು, ಆದ್ದರಿಂದ ಅವರು ಬರಹಗಾರನ ಬರಹಗಳಲ್ಲಿರುವ ಸಂದೇಶವನ್ನು ಸ್ವೀಕರಿಸಬೇಕೆಂದು ("ಸಹಿಸಿಕೊಳ್ಳಬೇಕು") ಮತ್ತು ಅದರ ಬಗ್ಗೆ ಅವರ ಹೃದಯಗಳು ತೆರೆದಿಡಬೇಕೆಂದು ಎಂದನು. ಅವನು ಬಹಳವಾಗಿ ಬರೆದನು ಎಂದು ಕೆಲವರು ಭಾವಿಸಿರಬಹುದು. ಹೌದು, ಅವನ ಸಕಲ ಪ್ರಸ್ತಾಪಗಳನ್ನು ಅಲ್ಪವಾಗಿ ಮಾತನಾಡಿರುವದರಿಂದ, ಅವನು ಬರೆದಿರುವ ವಿಷಯವು ಅಪಾರವಾಗಿದೆ.

### "ದೇವ ಜನರೆಲ್ಲರಿಗೆ ವಂದನೆ ಹೇಳಿರಿ" (13:24)

ವಚನ 24ರ ಆರಂಭದಲ್ಲಿ ತನ್ನ ಅಪಾರ ಓದುಗರಲ್ಲಿ ಕೆಲವರ ಕುರಿತಾಗಿ ಮಾತ್ರ ಬರೆದಿರಬಹುದು. ಅವರಲ್ಲಿ ಯೆಹೂದ್ಯ ಕ್ರೈಸ್ತರಲ್ಲಿ ಅನೇಕರು ನಂಬಿಕೆಯನ್ನು ತೊರೆದು ಹೋಗಿದ್ದರು (10:24, 25). ಅವರ ನಾಯಕರಿಗೆ ಕಿವಿಗೊಡುತ್ತಿರಲಿಲ್ಲ (13:17). ಇಂಥವರು ಪೂರ್ಣವಾಗಿ ಹಿಂಜರಿದು ಹೋಗುವ ಸಾಧ್ಯತೆಯಿತ್ತು (ಇಬ್ರಿಯ 6:1-8; 10:23-31). ಅವರು ಪರಸ್ಪರ ಅನ್ಯೋನ್ಯತೆಯನ್ನು ಕ್ರಮಪಡಿಸಬೇಕಿತ್ತು. (ಸಭೆಯಲ್ಲಿ ನಂಬಿಗಸ್ತರಾಗಿ ನೆಲೆಸಲು ಪರಸ್ಪರರ ಅಗತ್ಯತೆಯಿದೆ) (ನೋಡಿರಿ 10:24).

## ಮುಕ್ತಾಯ (13:20, 21, 23, 25)

ಪತ್ರಿಕೆಯ ಅಂತ್ಯದಲ್ಲಿ ವೈಯಕ್ತಿಕವಾದ ಒಂದು ಹೇಳಿಕೆಯನ್ನು ಸೇರಿಸಲಾಗಿದೆ (ವಚನ 23). ಆದರೆ ಅಂತಿಮ ಪದಗಳಲ್ಲಿ, ಅಂತ್ಯಾಶೀರ್ವಾದವು ಅಡಕವಾಗಿದೆ (ವಚನಗಳು 20, 21). ಹಾಗು ಕ್ಲುಪ್ತ ಆಶೀರ್ವಾದವನ್ನು ಮಾಡಲಾಗಿದೆ (ವಚನ 25). ಅಂತ್ಯಾಶೀರ್ವಾದವು

ಹೊಸ ಒಡಂಬಡಿಕೆಯಲ್ಲಿನ ಅದ್ಭುತ ಸಂಗತಿಯಾಗಿದೆ. ಇಲ್ಲಿ ಯೇಸುವಿನ ಕುರಿತಾಗಿ ಹೇಳಲಾಗಿದೆ. ಇಬ್ರಿಯ ಕ್ರೈಸ್ತರು ಯೇಸುವಿನ ಬಳಿಗೆ ಬಂದು ಆತನನ್ನೇ ಗಟ್ಟಿಯಾಗಿ ಹಿಡಿದುಕೊಳ್ಳ ಬೇಕಿತ್ತು.[2] ನಾವು ಯೇಸುವಿನಲ್ಲಿ ನಂಬಿಗಸ್ತರಾಗಿದ್ದರೆ, ಆತನು ನಮ್ಮನ್ನು ಸಕಲ ಸನ್ನದ್ಧರಾಗಿ ಮಾಡುವನು ನಾವು ಬಯಸುವ ಸಕಲವು ಒಳ್ಳೆಯದಲ್ಲ, ಆತನ ಚಿತ್ತಕ್ಕೆ ಅಗತ್ಯವಿರುವ ಒಳ್ಳೆಯ ಕಾರ್ಯಗಳನ್ನು ಮಾತ್ರ ಮಾಡುವನು (ವಚನ 21).

ತನ್ನ ಓದುಗರೊಂದಿಗೆ ಕರ್ತನ ಕೃಪೆಯು ನೆಲಸಲಿ ಎಂಬ ಪ್ರಾರ್ಥನೆಯನ್ನು ಬರಹಗಾರನು ಮಾಡಿರುವನು. ಇದನ್ನು ಅಂತ್ಯಗೊಳಿಸುವಾಗ, ದೇವರ ಕೃಪೆಯು *ಟ್ರುಥ್ ಫಾರ್ ಟುಡೇಯನ್ನು* ಓದುವವರ ಸಂಗಡಲೂ ಇರಲಿ, "ಕೃಪೆಯು ನಿಮ್ಮೆಲ್ಲರೊಂದಿಗೆ ಇರಲಿ" (ವಚನ 25)!

---

## ಬೋಧಕರಿಗಾಗಿ ಟಿಪ್ಪಣಿ

ನಾಯಕತ್ವದ ವಿಚಾರದಲ್ಲಿ, ಹಿಂಬಾಲಿಸುವ ಉತ್ತಮ ಜನರ ಬಗ್ಗೆಯೂ ತಿಳಿಸಿರುವೆನು.[3] ಇಬ್ರಿಯ 13ರಲ್ಲಿ, ಹಿರಿಯರ ಬಗ್ಗೆ ಸಭೆಯವರಲ್ಲಿ ಇರಬೇಕಾದ ಹೊಣೆಗಾರಿಕೆಯನ್ನು ತಿಳಿಸಲಾಗಿದೆ:

1. ಅವರನ್ನು ಒಪ್ಪುವ ಅಭಿಪ್ರಾಯದಿಂದ ಸ್ವೀಕರಿಸಿರಿ (ವಚನ 7).
2. ಆಧೀನ ಮನಸ್ಸಿನಿಂದ ಅವರನ್ನು ಗೌರವಿಸಿರಿ (ವಚನ 17)
3. ಅವರೊಂದಿಗೆ ಪ್ರೀತಿಯ ಸಂಬಂಧವಿರಲಿ (ವಚನ 24ಬಿ).

ಈ ಮೂರು ವಚನಗಳಿಂದ ಹೆಚ್ಚಿನ ಪ್ರಸಂಗವನ್ನು ಇಬ್ರಿಯ 13ರಲ್ಲಿ ಸಹಾಯವಾಗುವಂತೆ ಬೋಧಿಸಬಹುದು.

---

ಟಿಪ್ಪಣಿಗಳು

[1]ನಾಯಕರನ್ನು ಹಿಂಬಾಲಿಸದವರ ಬಗ್ಗೆ ಚಿಂತಿಸಿದನು. ಹಾಗೂ ಹಿರಿಯರು ಅವರ ಮೇಲೆ ದಬ್ಬಾಳಿಕೆ ಮಾಡಬಾರದು (1 ಪೇತ್ರ 5:3). ಹಿರಿಯರು ಗೌರವಯುಕ್ತರಾಗಿ ಸಭೆಯಲ್ಲಿ ಜೀವಿಸಬೇಕು. [2]Neil. R. Lightfoot, ACU extension class on Hebrews taught in Fort Worth, Texas, 26 October 1985. [3]David Roper, "Three 'R's' of 'Follow-ship,' " in "Developing Leadership," *Truth for Today* (July 2007): 36-37.